ಕಾಯಿದೆಗೆ ನಮ್ಮ ವಿರೋಧ ಎನ್ನುತ್ತಾ ಮನೆ ಮನೆಗಳಿಗೆ ನುಗ್ಗಿ ದೋಚಿ ಬೆಂಕಿ ಇಟ್ಟರು. ಎರಡೂ ಬೀದಿಗಳ ಮನೆಗಳ ಬೆಂಕಿ ಲಂಕಾದಹನವನ್ನು ನೆನಪಿಸುವಾಗ ಗುಂಪು ಪೊಲೀಸು ಸ್ಟೇಷನ್ನಿಗೆ ನುಗ್ಗಿ ಬೆಂಕಿ ಇಟ್ಟಿತು. ಸ್ಟೇಷನು ಉರಿಯುವಾಗ ಕೋವಿ ಹಿಡಿದು ಹೊರಬಂದ ಪೊಲೀಸರು ಗಾಳಿಯಲ್ಲಿ ಅಶ್ರುವಾಯು ಸಿಡಿಸಿದರು. ಗುಂಪು ಪೊಲೀಸ್ ಕುನ್ನಿಯೋಂಕೇ ಮಾರ್ಡಾಲೋ ಎಂದು ಬೊಬ್ಬಿಟ್ಟು ಮುಂದಕ್ಕೆ ನುಗ್ಗಿತು. ಆಗ ಇನ್‌ಸ್ಪೆಕ್ಟರ್ ಫಾಯರ್ ಎಂದ. ಎಂಟು ಹೆಣಗಳು ಉರುಳಿದಾಗ ಎರಡೂ ಗುಂಪು ಪಲಾಯನ ಮಾಡಿತು.

ಗಂಡನನ್ನು ಆಸ್ಪತ್ರೆಗೆ ಸೇರಿಸಿ ಬಂದಿದ್ದ ಅವಳು ಅರ್ಧ ಸುಟ್ಟು ಹೋದ ಮನೆಯಲ್ಲಿ ಇರಲಾಗದೆ ಬೂಬಮ್ಮನ ಮನೆಗೆ ಹೋದಾಗ ಅವಳ ಸೊಸೆ ನೀನು ಇಲ್ಲೇ ನನ್ನ ಜೊತೆಯಲ್ಲಿ ಮಲಗು. ತಿನ್ನಲು ನಮ್ಮಲ್ಲೂ ಏನೂ ಇಲ್ಲ. ಆದರೆ, ಕುಡಿಯಲಿಕ್ಕೆ ನೀರುಂಟು ಎಂದು ಒಂದು ಚೊಂಬು ನೀರು ಅವಳಿಗಿತ್ತಳು. ಅಲ್ಲಾ ಕಾರ್ಪೊರೇಟರೂ ನಮ್ಮವನೇ, ಎಂಎಲ್‌ಎನೂ ನಮ್ಮವನೇ, ಆದರೆ ಅವರ ಕಡೆಯವರು ನಮ್ಮವರ ಮನೆಗಳನ್ನೇ ಸುಟ್ಟರಲ್ಲಾ? ಇದೆಂಥಾ ಕೇಡುಗಾಲ ಎಂದು ಕೇಳಿದ್ದಕ್ಕೆ ಅವರಿಬ್ಬರು ಒಬ್ಬರನ್ನೊಬ್ಬರು ತುಳಿದು ಮೇಲಕ್ಕೆ ಬರಲು ನೋಡುತ್ತಿದ್ದಾರೆ. ಅದಕ್ಕೆಂದು ನಮ್ಮ ಹುಡುಗರಿಗೆ ಗಾಂಜಾ ಕೊಟ್ಟು ತಯಾರು ಮಾಡಿದ್ದಾರೆ. ಗಾಂಜಾ ಸೇದಿದರೆ ಪ್ರಪಂಚವೇ ಮರೆತು ಹೋಗುತ್ತದಂತೆ. ಹಾಗೆ ನಮ್ಮವರೇ ನಮ್ಮ ಮನೆಗಳನ್ನು ಸುಟ್ಟಿದ್ದಾರೆ. ಇನ್ನು ನಮಗೆ ಪರಿಹಾರ ಕೊಡಲು ಬರುವವರು ಕಣ್ಣೀರು ಸುರಿಸುತ್ತಾರೆ. ಇವರು ಕೊಡುವ ಎರಡು ಸಾವಿರದಿಂದ ಸುಟ್ಟ ಮನೆಗಳನ್ನು ಸರಿಪಡಿಸಲು ಸಾಧ್ಯವೇ ಎಂದು ಗೊಣಗಿದಳು.

ಅವಳು ಗಂಡನ ನೆನಪಾಗಿ ನಡುಗಿದಳು. ಮನೆಯ ಛಾವಣಿ ಸುಟ್ಟಿದೆ. ಅದನ್ನು ಸರಿಪಡಿಸಲು ಹಣ ಎಲ್ಲಿಂದ ತರುವುದು? ಅಪ್ಪ ಅಮ್ಮ ಮದುವೆ ಮಾಡಿಸಿಕೊಟ್ಟದ್ದೇ ಕಷ್ಟದಲ್ಲಿ. ಅವರನ್ನು ಇನ್ನು ಹಣಕ್ಕಾಗಿ ಪೀಡಿಸುವುದೇ? ಗಂಡನ ಜ್ವರ ಏತರದೋ ನಾ ಕಾಣೆ. ಅದು ಒಂದು ವೇಳೆ ಕೊರೊನಾನೇ ಆದರೆ ಹದಿನೈದು ದಿನ ಆಸ್ಪತ್ರೆಯಲ್ಲಿರಬೇಕು. ಆಸ್ಪತ್ರೆಯ ಬಿಲ್ಲು ಎಷ್ಟಾಗುತ್ತದೋ? ಇನ್ನು ಗಂಡ ಮತ್ತೆ ಹೂ ವ್ಯಾಪಾರ ಮಾಡುವುದು ಯಾವತ್ತೊ? ಅಲ್ಲಿಯವರೆಗೆ ಹೊಟ್ಟೆಗೆ ಹಾಕುವುದೇನು? ಪರಿಹರಿಸಲಾಗದ ಪ್ರಶ್ನೆಗಳ ನಡುವೆ ತಾನು ಬಂದಿಯಾಗಿದ್ದೇನೆ ಎಂದು ಅವಳಿಗೆ ಅನಿಸಿತು.

ಯೋಚಿಸುತ್ತಾ ಕುಳಿತವಳಿಗೆ ನಿದ್ದೆ ಹತ್ತಿ ಹಾಗೆ ಬಿದ್ದುಕೊಂಡಳು. ಇಡೀ ದಿನ ಸ್ವಲ್ಪವೂ ವಿಶ್ರಾಂತಿ ಸಿಗದ ಅವಳಿಗೆ ಗಾಢನಿದ್ದೆ ಹತ್ತಿಕೊಂಡಿತು. ನಿದ್ದೆಯಲ್ಲೇ ಅವಳು ಕನಸು ಕಂಡಳು. ತನ್ನ ಗಂಡನ ಕೊರೊನಾ ಗುಣವಾದ ಹಾಗೆ, ಮನೆಯನ್ನು ಎಂಎಲ್‌ಎ ಕಡೆಯವರು ಸರಿಪಡಿಸಿಕೊಟ್ಟ ಹಾಗೆ. ತಾನೊಂದು ಹೊಲಿಗೆಯಂತ್ರ ತಂದು ಬಟ್ಟೆ ಹೊಲಿದು ಗಂಡನನ್ನು ಸಾಕಿದ ಹಾಗೆ, ತನಗೊಂದು ಚೆಲುವಾದ ಹೆಣ್ಣು ಮಗು ಆದ ಹಾಗೆ. ಅದಕ್ಕೆ ತಾನು ಬಣ್ಣ ಬಣ್ಣದ ಫ್ರಾಕು ಹೊಲಿದು ಹಾಕಿ ಚೆಂದ ನೋಡಿ ಸಂಭ್ರಮಿಸಿದ ಹಾಗೆ. ಅದು ಶಾಲೆಗೆ ಹೋಗಿ ತುಂಬಾ ಕಲಿತ ಹಾಗೆ. ವಿಮಾನದಲ್ಲಿ ಬಂದವನೊಬ್ಬ ಹುಡುಗಿಯನ್ನು ಮದುವೆಯಾಗಿ ತನ್ನನ್ನೂ, ಗಂಡನನ್ನೂ ಮಗಳೊಡನೆ ಸೌದಿಗೆ ಕರಕೊಂಡು ಹೋದ ಹಾಗೆ.

ಮಸೀದಿಯಿಂದ ಮೋಜನ್‌ನ ಬಾಂಗು ಕೇಳಿಸಿದಾಗ ಅವಳಿಗೆ ಎಚ್ಚರವಾಯಿತು. ತಾನು ಎಲ್ಲಿದ್ದೇನೆ ಎಂದು ಖಚಿತಪಡಿಸಲು ಸ್ವಲ್ಪ ಹೊತ್ತು ಬೇಕಾಯಿತು. ಬೂಬಮ್ಮನ ಬಿ.ಎ. ಸೊಸೆ ಇನ್ನೂ ಗಾಢ ನಿದ್ದೆಯಲ್ಲಿದ್ದಳು. ಅವಳನ್ನು ಎಬ್ಬಿಸಲು ಮನಸ್ಸಾಗದೆ ಸದ್ದಾಗದಂತೆ ತನ್ನ ಮನೆಯತ್ತ ನಡೆದಳು. ಒಳಕೋಣೆಯಲ್ಲಿ ತನ್ನ ಸೂಟುಕೇಸು ಸುರಕ್ಷಿತವಾಗಿರುವುದನ್ನು ಕಂಡು ಅಲ್ಲಾನಿಗೆ ಕೃತಜ್ಞತೆ ಅರ್ಪಿಸಿದಳು. ಬಚ್ಚಲ ಹಂಡೆಯಲ್ಲಿ ಸ್ವಲ್ಪ ನೀರಿತ್ತು. ಮೂರು ದಿನದಿಂದ ತಾನು ಸ್ನಾನ ಮಾಡದ್ದು ನೆನಪಾಗಿ ಆ ನೀರನ್ನು ಮೈ ಮೇಲೆ ಹೊಯ್ದುಕೊಂಡಳು. ಶರೀರದಿಂದ